(ಈ) ೧೯೯೨ ರ ಪ್ರಕರಣ ... ರೂ. ೨೩.೦೦ ಲಕ್ಷ
೧೯೯೪ ರ ಪ್ರಕರಣ ... ನಷ್ಟವನ್ನು ಅಂದಾಜು ಮಾಡಿರುವುದಿಲ್ಲ.

(ಉ) ನಾನಾಜಿ ಹಾಡಿಯು ಅರಣ್ಯ ರಸ್ತೆಯ ಪಕ್ಕದಲ್ಲಿದ್ದು ಪ್ರತಿ ಸಲವೂ ಅರಣ್ಯ ಸಿಬ್ಬಂದಿಯು ರು ಅರಣ್ಯ ಗಸ್ತು ಮಾಡುವ ವೇಳೆಯಲ್ಲಿಯೂ ಸದರಿ ಹಾಡಿಯ ಮುಂದೆಯೇ ಹಾದುಹೋಗಬೇಕಾಗಿರುತ್ತೆ ಹೆಡ್ಡಿ ಎಂಬ ಹೆಸರಿನ ಹಾಡಿ ಯಾವುದೂ ಇರುವುದಿಲ್ಲ.

ಗ್ರಂಥಾಲಯ ಸಹಾಯಕರ ಹುದ್ದೆ ಭರ್ತಿ

೪೮೩.(೮೨೯) ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರೆ).—ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯ ಹಾಗೂ ಮುದ್ರಣ ವಸ್ತು ಲೇಖನ ಸಾಮಗ್ರಿಗಳ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

(ಅ) ಗ್ರಂಥಾಲಯ ಸಹಾಯಕರ ಹುದ್ದೆಗಳನ್ನು ಗ್ರಂಥಗಳ ಸಂಗ್ರಹಣೆ ಆಧರಿಸಿ ಮುಂಬಡ್ತಿ ನೀಡುವ ಬಗ್ಗೆ ಸರ್ಕಾರಿ ಆಜ್ಞೆ ಇರುವುದೆ?

(ಆ) ಹಾಗಾದರೆ ಎಷ್ಟು ಜನರಿಗೆ ಮುಂಬಡ್ತಿ ಕೊಡಲಾಗಿದೆ?

(ಇ) ಮಂಡಲ ಗ್ರಂಥಾಲಯ ಮೇಲ್ವಿಚಾರಕರನ್ನು ಖಾಯಂ ಮಾಡುವ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ?

(ಈ) ಸಾರ್ವಜನಿಕ ಗ್ರಂಥಾಲಯ ಕಾಯಿದೆ ಪ್ರಕಾರ ೧ ಲಕ್ಷ ಜನ ಸಂಖ್ಯೆ ಹೊಂದಿದ ನಗರಗಳಿಗೆ ನಗರ ಗ್ರಂಥಾಲಯ ಸ್ಥಾಪಿಸುವ ಅವಕಾಶ ಸರಕಾರದ ಮುಂದಿದೆಯೇ?

(ಉ) ಎಷ್ಟು ನಗರಗಳು ೧ ಲಕ್ಷ ಜನ ಸಂಖ್ಯೆ ಮೀರಿವೆ?

ಶ್ರೀ ಪ್ರಭಾಕರ್ ಎಸ್. ರಾಣೆ (ವಯಸ್ಕರ ಶಿಕ್ಷಣ ರಾಜ್ಯ ಸಚಿವರು).—

(ಅ) ಇದೆ.

(ಆ) ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

(ಇ) ಮಂಡಲ ಗ್ರಂಥಾಲಯ ಮೇಲ್ವಿಚಾರಕರನ್ನು ಗೌರವ ಸಂಭಾವನೆಯ ಆಧಾರದ ಮೇಲೆ ನೇಮಕಾತಿ ಮಾಡಿರುವುದರಿಂದ ಖಾಯಂ ಮಾಡಲು ಬರುವುದಿಲ್ಲ.

(ಈ) ಹೌದು. ಈಗಾಗಲೇ ೧೦ ನಗರಗಳಿಗೆ ಈ ಸೌಲಭ್ಯ ನೀಡಲಾಗಿದೆ. ನಾಲ್ಕು ನಗರಗಳಿಗೆ ನಗರ ಗ್ರಂಥಾಲಯ ಸ್ಥಾಪಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

(ಉ) ೧೮ ನಗರಗಳು.

ಚನ್ನಪಟ್ಟಣ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ಕಂಪ್ಯೂಟರ್ ಮತ್ತು ಎಲೆಕ್ಟ್ರಾನಿಕ್ ಕೋರ್ಸ್ ಪ್ರಾರಂಭ

೪೮೪ (೮೩೩) ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ).—ಮಾನ್ಯ ಉನ್ನತ ಶಿಕ್ಷಣ ಹಾಗೂ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

(ಅ) ಚನ್ನಪಟ್ಟಣದ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ಕಂಪ್ಯೂಟರ್ ಮತ್ತು ಎಲೆಕ್ಟ್ರಾನಿಕ್ ಕೋರ್ಸ್‌ಗಳನ್ನು ಪ್ರಾರಂಭಿಸುವ ಪ್ರಸ್ತಾವನೆಯು ಬಾಕಿ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಆ) ಈ ಕೋರ್ಸುಗಳನ್ನು ಒಳಗೊಂಡಂತೆ ಚನ್ನಪಟ್ಟಣದಲ್ಲಿ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ೧೯೯೪-೯೫ನೇ ಸಾಲಿನಲ್ಲಿ ಹೊಸ ಕೋರ್ಸುಗಳನ್ನು ಪ್ರಾರಂಭಿಸುವ ಪ್ರಸ್ತಾವನೆಯು ಸರ್ಕಾರದಲ್ಲಿದೆಯೆ?

ಇ) ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮ ?

ಈ) ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಹಾಗೂ ವರ್ಕ್ಸ್ ಸಚಿವರು). —

ಅ) ಇಲ್ಲ.

ಆ) ಇಲ್ಲ.

ಇ) ಅನ್ವಯಿಸುವುದಿಲ್ಲ.

ಈ) ಅನ್ವಯಿಸುವುದಿಲ್ಲ.

ರಾಜ್ಯದಲ್ಲಿ ವೈದ್ಯರ ಕೊರತೆ ಬೌರಿಂಗ್ ಮತ್ತು ವಿಕ್ಟೋರಿಯ ಆಸ್ಪತ್ರೆಗಳ ಆಧುನೀಕರಣ

೪೮೬ (೮೦೭) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).—ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ: —

ಅ) ರಾಜ್ಯದಲ್ಲಿ ವಿವಿಧ ಹಂತದ ಆಸ್ಪತ್ರೆಗಳಲ್ಲಿ ಎಷ್ಟು ವೈದ್ಯರ ಕೊರತೆ ಇದೆ ?

ಆ ಬೆಂಗಳೂರಿನ ಬೌರಿಂಗ್ ಆಸ್ಪತ್ರೆ, ವಿಕ್ಟೋರಿಯಾ ಆಸ್ಪತ್ರೆ, ಮೈಸೂರಿನ ಕೆ.ಆರ್. ಆಸ್ಪತ್ರೆಗಳನ್ನು ಆಧುನೀಕರಣಗೊಳಿಸಲು ಸರ್ಕಾರದ ಯೋಜನೆ ಇದೆಯೇ ?

ಶ್ರೀ ಜಿ. ರಾಮಕೃಷ್ಣ (ವೈದ್ಯಕೀಯ ಶಿಕ್ಷಣ ಸಚಿವರು). —

ಅ) ರಾಜ್ಯದಲ್ಲಿ ವಿವಿಧ ಹಂತದ ಆಸ್ಪತ್ರೆಗಳಲ್ಲಿ ಒಟ್ಟು ೪೪೧ ವೈದ್ಯರುಗಳ ಹುದ್ದೆ ಖಾಲಿ ಇವೆ ಇವುಗಳಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ೩೩೬ ಮತ್ತು ನಗರ ಪ್ರದೇಶದಲ್ಲಿ ೧೦೫ ವೈದ್ಯರುಗಳ ಹುದ್ದೆಗಳು ಖಾಲಿ ಇವೆ ಹಾಗೂ ಭೋಧಕ ಆಸ್ಪತ್ರೆಗಳಲ್ಲಿ ಪ್ರಾಧ್ಯಾಪಕರು ೧೬೨, ಸಹಾಯಕ ಪ್ರಾಧ್ಯಾಪಕರು ೮೫ ಮತ್ತು ಉಪನ್ಯಾಸಕರ ೧೫೬ ಹುದ್ದೆಗಳು ಖಾಲಿ ಇವೆ.

ಆ) ಬೌರಿಂಗ್ ಆಸ್ಪತ್ರೆ, ವಿಕ್ಟೋರಿಯಾ ಆಸ್ಪತ್ರೆ ಹಾಗೂ ಕೆ.ಆರ್. ಆಸ್ಪತ್ರೆಗಳನ್ನು ಆಧುನೀಕರಣಗೊಳಿಸಲು ಸರ್ಕಾರದ ಯೋಜನೆ ಇದೆ.

ಅ) ೧) ಬೌರಿಂಗ್ ಆಸ್ಪತ್ರೆಯನ್ನು ಆಧುನೀಕರಣಗೊಳಿಸಲು ವಿಶೇಷ ವಾರ್ಡ್ ಶವಾಗಾರಕ್ಕೆ ಶೈತ್ಯಾಗಾರ ಕೊಠಡಿ ನಿರ್ಮಿಸುವ ಸಲುವಾಗಿ ಮತ್ತು ಒಂದು ವಿಶೇಷವಾರ್ಡ್ ನಿರ್ಮಾಣದ ಸಲುವಾಗಿ ೧೧೬. ೦ ಲಕ್ಷ ರೂ.ಗಳ ಆಡಳಿತಾತ್ಮಕ ಮಂಜೂರಾತಿ ನೀಡಿದೆ.

೨) ಆಪರೇಷನ್ ಥಿಯೆಟರ್ ಕಟ್ಟಡ ನಿರ್ಮಾಣಕ್ಕಾಗಿ ೯೫.೦೦ ಲಕ್ಷ ರೂ.ಗಳ ಅಂದಾಜು ವೆಚ್ಚದ ಕೆಲಸವು ಪ್ರಗತಿಯಲ್ಲಿದೆ ಮತ್ತು ಹೆಚ್ಚುವರಿ ಕಾಮಗಾರಿಗಾಗಿ ೩೫.೫೦ ಲಕ್ಷ ರೂ.ಗಳ ಆಡಳಿತಾತ್ಮಕ ಮಂಜೂರಾತಿ ನೀಡಿದೆ.

ಆ) ೧) ವಿಕ್ಟೋರಿಯಾ ಆಸ್ಪತ್ರೆಯನ್ನು ಆಧುನೀಕರಣಗೊಳಿಸಲು ಮಹಾ ಯೋಜನೆಯಲ್ಲಿ ನೆಲ ಮತ್ತು ಮೊದಲನೇ ಮಹಡಿಯ ಕಟ್ಟಡ ಕಾಮಗಾರಿ ಮುಗಿದು ಉಪಯೋಗಕ್ಕೆ ಸಿದ್ಧವಾಗಿದೆ. ೨ನೇ ಮತ್ತು ೩ನೇ ಮಹಡಿಯ ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ. ಒಟ್ಟು ೨೭೭.೦೦ ಲಕ್ಷ ರೂ.ಗಳ ಅಂದಾಜು ವೆಚ್ಚದ ಕಾಮಗಾರಿ ಪ್ರಗತಿಯಲ್ಲಿದೆ.

೨) ವಿಕ್ಟೋರಿಯ ಆಸ್ಪತ್ರೆಯ ಆವರಣದಲ್ಲಿ ಎರಕದ ಕೊಠಡಿ (ಮೌಲ್ಡ್ ರೂಂ) ನಿರ್ಮಾಣದ ಸಲುವಾಗಿ ರೂ. ೧.೨೫ ಲಕ್ಷ ರೂ.ಗಳ ಅಂದಾಜು ವೆಚ್ಚದಲ್ಲಿ ಕಾಮಗಾರಿ ಕೈಗೊಳ್ಳುವ ಕ್ರಮ ತೆಗೆದುಕೊಳ್ಳಲಾಗಿದೆ.